ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

NAAC Accredited with "A" Grade 2022
**ಸಿಂಡಿಕೇಟ ವಿಭಾಗ**

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-68/2025-26/ 185 ದಿನಾಂಕ: 31-03-2026

**:: ಸಿಂಡಿಕೇಟ ಸಭೆಯ ನಡಾವಳಿಗಳು ::**

ಕರ್ನಾಟಕ ವಿಶ್ವವಿದ್ಯಾಲಯದ 2025-26ನೇ ಸಾಲಿನ 8ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ 26 ಮಾರ್ಚ್, 2026 ರಂದು ಮುಂಜಾನೆ 11:00 ಗಂಟೆಗೆ** ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಿಂಡಿಕೇಟ ಸಭೆಗೆ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಡಾ(ಶ್ರೀಮತಿ). ಕರೀಮುನ್ನಿಸ್ಸಾ ಸಯ್ಯದ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 3) | ಡಾ. ಎಮ್. ಎಚ್. ಅಗಡಿ, ಡೀನರು, ಕ.ವಿ.ವಿ. ಧಾರವಾಡ | ಸದಸ್ಯರು |
| 4) | ಶ್ರೀಮತಿ. ರತ್ನಾ ಪಾಟೀಲ, ಧಾರವಾಡ | ಸದಸ್ಯರು |
| 5) | ಡಾ.(ಶ್ರೀಮತಿ). ಎನ್. ಸಿ. ಪಾಟೀಲ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 6) | ಡಾ. ಬಿ. ಬಿ. ಹೊಳಗುಂದಿ, ಪ್ರಾಚಾರ್ಯರು, ಗದಗ | ಸದಸ್ಯರು |
| 7) | ಡಾ. ಬಿ. ಎಲ್. ಗುಂಡೂರ, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| 8) | ಡಾ. ಎಸ್. ವಿ. ವಸ್ತ್ರದ, ಪ್ರಾಚಾರ್ಯರು, ಅಂಕೋಲಾ | ಸದಸ್ಯರು |
| 9) | ಡಾ(ಶ್ರೀಮತಿ). ಎಚ್. ಎಸ್. ಅನುಪಮ, ಹೊನ್ನಾವರ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 10) | ಶ್ರೀ. ಮಹೇಶ ವಾಯ್. ಹುಲೇನ್ನವರ, ಧಾರವಾಡ | ಸದಸ್ಯರು |
| 11) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 12) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 13) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 14) | ಡಾ. ಎನ್. ವಾಯ್. ಮಟ್ಟಿಹಾಳ, ಕುಲಸಚಿವರು(ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 15) | ಶ್ರೀ. ಪ್ರದೀಪಕುಮಾರ, ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 16) | ಡಾ. ಶಂಕರ ವನಿಕ್ಯಾಳ, ಕೆಎಎಸ್, ಕುಲಸಚಿವರು(ಆಡಳಿತ). ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 15ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು ಅಂದರೆ 16 ಜನ ಸದಸ್ಯರುಗಳು (02 ಸದಸ್ಯರು ಆನ್‌ಲೈನ್ ಮತ್ತು 14 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮುಂಜಾನೆ 11:00 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಸಭೆಯ ಅಧ್ಯಕ್ಷರಾದ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

-

-

-

-

-

**ಕುಲಸಚಿವರು** **ಕುಲಪತಿಗಳು**

## ದಿನಾಂಕ 26.03.2026 ರಂದು ಜರುಗಿದ ಸಾಧಾರಣ ಸಿಂಡಿಕೇಟ ಸಭೆ

**ಮಾನ್ಯ ಕುಲಪತಿಗಳಿಂದ ಪ್ರಾರಂಭ:**

**ಸಿಂಡಿಕೇಟ ಸದಸ್ಯರ ಸದಸ್ಯತ್ವದ ಅವಧಿ ಕೊನೆಗೊಂಡ ಪ್ರಯುಕ್ತ ವಂದನೆ.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಇ) ರ ಅಡಿಯಲ್ಲಿ ಘನತೆವೆತ್ತ ರಾಜ್ಯಪಾಲರ ನಾಮಾಂಕಿತರಾಗಿ ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಗೊಂಡಿದ್ದ **ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಹುಬ್ಬಳ್ಳಿ** ಇವರ ಸಿಂಡಿಕೇಟ ಸದಸ್ಯತ್ವವು **ದಿನಾಂಕ: 20.03.2026** ರಂದು ಕೊನೆಗೊಂಡಿದ್ದು, ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃಧ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

-
-
-
-
-
-
-
-
-
-
-
-
-
-
-
-
-
-
-
-
-
-
-



**ಕುಲಸಚಿವರು** **ಕುಲಪತಿಗಳು**

| 1) | ವಿಷಯ | A) ದಿನಾಂಕ 30.12.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ |
|---|---|---|
| | **ನಿರ್ಣಯ** | ದಿನಾಂಕ 30.12.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. |
| | ವಿಷಯ | B) ದಿನಾಂಕ 17.01.2026 ರ ವಿಶೇಷ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ |
| | **ನಿರ್ಣಯ** | ದಿನಾಂಕ 17.01.2026 ರ ವಿಶೇಷ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. |
| | ವಿಷಯ | C) ದಿನಾಂಕ 14.02.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ |
| | **ನಿರ್ಣಯ** | ದಿನಾಂಕ 14.02.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. ಮುಂದುವರೆದು ಸದರಿ ನಡಾವಳಿಗಳಲ್ಲಿ ನಿರ್ಣಯ ಸಂಖ್ಯೆ 14 & 21 ಈ ಮುಂದೆ ಕಾಣಿಸಿದಂತೆ ತಿದ್ದುಪಡೆ ಮಾಡಲಾಗಿರುತ್ತದೆ. |

| ನಿರ್ಣಯ ಸಂಖ್ಯೆ | ದಾಖಲಾದ ನಿರ್ಣಯ | ತಿದ್ದುಪಡೆಗೊಳಿಸಿದ ನಿರ್ಣಯ |
|---|---|---|
| 14 | ಇವೆಂಜಲಿನಾ, ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಪ್ರಾಣಿಶಾಸ್ತ್ರ, ವಿಭಾಗ, ಕವಿವಿ,ಧಾರವಾಡ ಇವರ ವೈದ್ಯಕೀಯ ವೆಚ್ಚ ರೂ.1,23,582/- ಗಳನ್ನು ವಿಶ್ವವಿದ್ಯಾಲಯದ ವತಿಯಿಂದ ಭರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. | ಇವೆಂಜಲಿನಾ, ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಪ್ರಾಣಿಶಾಸ್ತ್ರ, ವಿಭಾಗ, ಕವಿವಿ, ಧಾರವಾಡ ಇವರ ವೈದ್ಯಕೀಯ ವೆಚ್ಚ ರೂ.1,23,582/- ಗಳನ್ನು **ವಿಶೇಷ ಪ್ರಕರಣವೆಂದು ಪರಿಗಣಿಸಿ,** ವಿಶ್ವವಿದ್ಯಾಲಯದ ವತಿಯಿಂದ ಭರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 21 | Syndicate Resolved to approve the permission for 05 scholars and one staff member from K.U.Dharwad to attend the certified short term course at prestigious UK Higher Education institution aiming to bridge educational gaps and after unique learning experiences to academically talented students form diverse socio-economic backgrounds initiative by KSHEC in collaboration with British Council. | Syndicate Resolved to approve the permission to 05 scholars and one staff member from K.U.Dharwad to attend the certified short term course at prestigious UK Higher Education institution aiming to bridge educational gaps and after unique learning experiences to academically talented students form diverse socio-economic backgrounds initiative by KSHEC in collaboration with British Council, **which is to be held during the month of May 2026, Further, the General** |



ಕುಲಸಚಿವರು

ಕುಲಪತಿಗಳು

<table>
<tr><td></td><td></td><td><table><tr><td></td><td></td><td>Administrative Department (GAD) is directed to issue the orders to the concerned accordingly.</td></tr></table></td></tr>
<tr><td></td><td>ವಿಷಯ</td><td>D) ದಿನಾಂಕ 05.03.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು.</td></tr>
<tr><td></td><td>ನಿರ್ಣಯ</td><td>ದಿನಾಂಕ 05.03.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವಾವ ನಿರ್ಣಯ ಸಂಖ್ಯೆ: 11 ನ್ನು ಈ ಕೆಳಗಿನಂತೆ ತಿದ್ದುಪಡೆ ಮಾಡಿ ಉಳಿದ ಎಲ್ಲ ನಿರ್ಣಯಗಳನ್ನು ಸಿಂಡಿಕೇಟ ಒಮ್ಮತದಿಂದ ದೃಢೀಕರಿಸಿತು.
<table>
<tr><th>ನಿರ್ಣಯ ಸಂಖ್ಯೆ</th><th>ದಾಖಲಾದ ನಿರ್ಣಯ</th><th>ತಿದ್ದುಪಡೆಗೊಳಿಸಿದ ನಿರ್ಣಯ</th></tr>
<tr><td>11</td><td>ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗಾಗಿ ಡಿಜಿಟಲ್ ಅಕಾಡೆಮಿಕ್ ಪ್ಲಾಟ್‌ಫಾರ್ಮ್ (Digital Academic Platform) ಅಳವಡಿಸುವ ವಿಷಯದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಸದರಿ ಪ್ರಸ್ತಾವನೆಯ ಇನ್ನು ಹೆಚ್ಚಿನ ಮಾಹಿತಿಯನ್ನು ತಿಳಿಯಲು, ಎಲ್ಲ ಸಿಂಡಿಕೇಟ್ ಸದಸ್ಯರ ಮುಂದೆ (Digital Academic Platform) ಕುರಿತು Demonstration ಮಾಡಲು ಸಭೆಯು ಅನುಮೋದಿಸಿತು.</td><td>ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗಾಗಿ ಡಿಜಿಟಲ್ ಅಕಾಡೆಮಿಕ್ ಪ್ಲಾಟ್‌ಫಾರ್ಮ್ (Digital Academic Platform) ಅಳವಡಿಸುವ ವಿಷಯದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಸದರಿ ಪ್ರಸ್ತಾವನೆಯ ಕುರಿತು ಇನ್ನು ಹೆಚ್ಚಿನ ಮಾಹಿತಿಯನ್ನು ತಿಳಿಯಲು, ನಿರ್ದೇಶಕರು, ಮಾಹಿತಿ ತಂತ್ರಜ್ಞಾನ (IT) ವಿಭಾಗ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಸಂಬಂಧಪಟ್ಟ ಸಂಸ್ಥೆಯಿಂದ (Digital Academic Platform) ಅಳವಡಿಸುವ ಕುರಿತು ಪ್ರದರ್ಶನ (Demonstration) ಮಾಡಿಸಿ ವರದಿಯನ್ನು ಮುಂದಿನ ಸಿಂಡಿಕೇಟ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.</td></tr>
</table></td></tr>
<tr><td>2)</td><td>ವಿಷಯ</td><td>Consideration of the proceedings of the meeting of the Library Advisory Board held on 03-02-2026.</td></tr>
<tr><td></td><td>ನಿರ್ಣಯ</td><td>ದಿನಾಂಕ: 03-02-2026 ರಂದು ಜರುಗಿದ ಗ್ರಂಥಾಲಯ ಸಲಹಾ ಮಂಡಳಿಯ ನಡುವಳಿಗಳನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಒಮ್ಮತದಿಂದ ಅನುಮೋದಿಸಿತು.</td></tr>
<tr><td>3)</td><td>ವಿಷಯ</td><td>ಡಾ. ಎಸ್.ಕೆ. ಪವಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಹಿಂದಿ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಧರ್ಮ ಪತ್ನಿಯಾದ ಶ್ರೀಮತಿ. ಕಮಲಾ ಎಸ್. ಪವಾರ ಇವರ ವೈದ್ಯಕೀಯ ವೆಚ್ಚ ರೂ.2,18,427/-ರ ಬಿಲ್ಲುಗಳನ್ನು ದಿನಾಂಕ: 28.01.2026 ರಂದು ಜರುಗಿದ ವೈದ್ಯಕೀಯ ಮಂಡಳಿಯಲ್ಲಿ ಪರಿಶೀಲಿಸಿ ರೂ.1,10,000/- ಗಳನ್ನು ಸದರಿಯವರಿಗೆ ಮಂಜೂರು ಮಾಡಿ ಶಿಫಾರಸ್ಸು ಮಾಡಿರುವ ವಿಷಯವನ್ನು ಪರಿಶೀಲಿಸುವ ಕುರಿತು.</td></tr>
</table>



ಕುಲಸಚಿವರು

ಕುಲಪತಿಗಳು

| | | |
|---|---|---|
| | **ನಿರ್ಣಯ** | ಡಾ. ಎಸ್.ಕೆ. ಪವಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಹಿಂದಿ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಧರ್ಮ ಪತ್ನಿಯಾದ ಶ್ರೀಮತಿ. ಕಮಲಾ ಎಸ್. ಪವಾರ ಇವರ ವೈದ್ಯಕೀಯ ವೆಚ್ಚ ರೂ.2,18,427/-ರ ಬಿಲ್ಲುಗಳನ್ನು ದಿನಾಂಕ: 28.01.2026 ರಂದು ಜರುಗಿದ ವೈದ್ಯಕೀಯ ಮಂಡಳಿಯಲ್ಲಿ ಪರಿಶೀಲಿಸಿ ರೂ.1,10,000/- ಗಳನ್ನು ಸದರಿಯವರಿಗೆ ಮಂಜೂರು ಮಾಡಿ ಶಿಫಾರಸ್ಸು ಮಾಡಿರುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಅನುಮೋದಿಸಿತು. |
| **4)** | ವಿಷಯ | ಡಾ. ಜೆ.ಆರ್. ಟೋಣಣ್ಣವರ ಇವರಿಗೆ ದಿನಾಂಕ:20.07.2025 ರಿಂದ ಅನ್ವಯವಾಗುವಂತೆ ಡಾ. ಎಸ್. ಆರ್. ಇನಾಮದಾರ ಇವರಿಗೆ ದಿನಾಂಕ:01.02.2025 ರಿಂದ ಅನ್ವಯವಾಗುವಂತೆ ಹಾಗೂ ಡಾ. ಎನ್.ಎಸ್. ಸಂಕೇಶ್ವರ ಮತ್ತು ಡಾ. ಜೆ.ಎಸ್. ಕಾಡದೇವರಮಠ ಇವರಿಗೆ ದಿನಾಂಕ:09.10.2025 ರಿಂದ ಅನ್ವಯವಾಗುವಂತೆ Adjunct Professor ಎಂದು ತಿದ್ದುಪಡಿ ಮಾಡಿ ಆದೇಶ ನೀಡುವಂತೆ ಮುಖ್ಯಸ್ಥರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ.ಧಾರವಾಡ ಇವರ ದಿನಾಂಕ:06.02.2026ರ ಪತ್ರಗಳನ್ನು ಪರಿಶೀಲಿಸುವ ಕುರಿತು. |
| | **ನಿರ್ಣಯ** | ವಿಭಾಗಗಳ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಡಾ. ಜೆ.ಆರ್. ಟೋಣಣ್ಣವರ ಇವರಿಗೆ ದಿನಾಂಕ:20.07.2025 ರಿಂದ ಅನ್ವಯವಾಗುವಂತೆ ಡಾ. ಎಸ್. ಆರ್. ಇನಾಮದಾರ ಇವರಿಗೆ ದಿನಾಂಕ:01.02.2025 ರಿಂದ ಅನ್ವಯವಾಗುವಂತೆ ಹಾಗೂ ಡಾ. ಎನ್.ಎಸ್. ಸಂಕೇಶ್ವರ ಮತ್ತು ಡಾ. ಜೆ. ಎಸ್. ಕಾಡದೇವರಮಠ ಇವರಿಗೆ ದಿನಾಂಕ:09.10.2025 ರಿಂದ ಅನ್ವಯವಾಗುವಂತೆ Adjunct Professor ಎಂದು ತಿದ್ದುಪಡಿ ಮಾಡಿ ಆದೇಶ ನೀಡುವಂತೆ ಮುಖ್ಯಸ್ಥರು, ಭೌತಶಾಸ್ತ್ರ, ಅಧ್ಯಯನ ವಿಭಾಗ, ಕ.ವಿ.ವಿ.ಧಾರವಾಡ ಇವರ ವಿನಂತಿಗೆ ಸಿಂಡಿಕೇಟ ಒಪ್ಪಿಗೆಯನನ್ನು ನೀಡಿತು. |
| **5)** | ವಿಷಯ | ದಿನಾಂಕ 01.04.2006 ರ ಪೂರ್ವದಲ್ಲಿ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರನ್ನು ಹಳೆಯ ಡಿಫೈನ್ಡ ಪಿಂಚಣಿ ಯೋಜನೆಗೆ ಒಳಪಡಿಸುವ ವಿಷಯದ ಪರಿಶೀಲನೆ ಕುರಿತು. |
| | **ನಿರ್ಣಯ** | ದಿನಾಂಕ 01.04.2006 ರ ಪೂರ್ವದಲ್ಲಿ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರನ್ನು ಹಳೆಯ ಡಿಫೈನ್ಡ ಪಿಂಚಣಿ ಯೋಜನೆಗೆ ಒಳಪಡಿಸುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಅನುಮೋದಿಸಿ ಸದರ ವಿಷಯವಾಗಿ ಮತ್ತೊಮ್ಮೆ ಸರ್ಕಾರಕ್ಕೆ ಪ್ರಸ್ತಾವಣೆಯನ್ನು ಸಲ್ಲಿಸಲು ಒಪ್ಪಿತು.<br>-<br>-<br>-<br>-<br>- |



**ಕುಲಸಚಿವರು** **ಕುಲಪತಿಗಳು**

| | | |
|---|---|---|
| **6)** | ವಿಷಯ | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಪರಿಚ್ಛೇದ 29(2)(h) ಮತ್ತು 48(1)ರ ಮೇರೆಗೆ 2025-2026ನೇ ಸಾಲಿನ ಪರಿಷ್ಕೃತ ಅಂದಾಜುಗಳನ್ನು ಹಾಗೂ 2026-2027 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಿಂಡಿಕೇಟ ಸಭೆ ಪರಿಶೀಲನೆ ಮತ್ತು ಅನುಮೋದನೆಗಾಗಿ ಮಂಡಿಸುವ ಕುರಿತು |
| | **ನಿರ್ಣಯ** | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಪರಿಚ್ಛೇದ 29(2)(h) ಮತ್ತು 48(1)ರ ಮೇರೆಗೆ 2025-2026ನೇ ಸಾಲಿನ ಪರಿಷ್ಕೃತ ಅಂದಾಜುಗಳನ್ನು ಹಾಗೂ 2026-2027 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| **7)** | ವಿಷಯ | ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆ, ಸ್ನಾತಕೋತ್ತರ ಶಾಖೆ ಮತ್ತು ಘಟಿಕೋತ್ಸವ ಶಾಖೆಗಳಿಗೆ ಎನ್. ಇ. ಪಿ. ಸ್ನಾತಕ/ಸ್ನಾತಕೊತ್ತರ ಪದವಿಯ ಅಂತಿಮ ವರ್ಷದ ನಾನ್ ಸಿಬಿಸಿಎಸ್ ಅಂಕಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿಯ ಅನುಮೊದನೆಗಾಗಿ ಮಂಡಿಸಲಾಗಿತ್ತು ದೊಡ್ಡ ಖರೀದಿ ಸಮಿತಿಯು ತೆಗೆದುಕೊಂಡ ನಿರ್ಣಯವನ್ನು ಆಡಳಿತ ಮಂಡಳಿಯ ಸಭೆಯ ದೃಢೀಕರಣಕ್ಕಾಗಿ ಮಂಡಿಸುವ ಕುರಿತು. |
| | **ನಿರ್ಣಯ** | ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆ, ಸ್ನಾತಕೋತ್ತರ ಶಾಖೆ ಮತ್ತು ಘಟಿಕೋತ್ಸವ ಶಾಖೆಗಳಿಗೆ ಎನ್. ಇ. ಪಿ. ಸ್ನಾತಕ/ಸ್ನಾತಕೊತ್ತರ ಪದವಿಯ ಅಂತಿಮ ವರ್ಷದ ನಾನ್ ಸಿಬಿಸಿಎಸ್ ಅಂಕಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿಯು ತೆಗೆದುಕೊಂಡ ನಿರ್ಣಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಹಣಕಾಸು ಅಧಿಕಾರಿಗಳು ಮತ್ತು ಕುಲಸಚಿವರು (ಮೌಲ್ಯಮಾಪನ) ಇವರಿಂದ MSIL ಬೆಂಗಳೂರು ಇವರಿಂದ ಖರೀದಿ ಮಾಡದೇ, ಇ-ಟೆಂಡರ ಮೂಲಕ ಖರೀದಿಸುವ ಬಗ್ಗೆ ಸೂಕ್ತ ಕಾರಣಗಳನ್ನು ಪಡೆದು ಕಡಿಮೆ ದರ ಮತ್ತು ಉತ್ತಮ ಗುಣಮಟ್ಟದ ಅಂಕಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಖರೀದಿಸಲು ಸೂಕ್ತವಾದದ್ದನ್ನು ಶಿಫಾರಸ್ಸು ಮಾಡಲು ಸಿಂಡಿಕೇಟ ಸಭೆಯು ಅನುಮೋದಿಸಿತು. |
| **8)** | ವಿಷಯ | ವರದಾ ವಸತಿ ನಿಲಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು ವಿಶ್ವವಿದ್ಯಾಲಯದ ಲೆಕ್ಕ ಶೀರ್ಷಿಕೆ 2114 ರಿಂದ ಭರಿಸುವ ಕುರಿತು. |
| | **ನಿರ್ಣಯ** | ವರದಾ ವಸತಿ ನಿಲಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆ ಮಾಡಿಕೊಳ್ಳಲು ಕ್ರಮಜರುಗಿಸಿ, ಸಧ್ಯ ಗುತ್ತಿಗರದಾರರಿಗೆ ಸಪ್ಟೆಂಬರ/ ಅಕ್ಟೋಬರ್ 2025 ರ ಬಾಕಿ ಇರುವ ಮೊತ್ತ ರೂ.1,41,050/-ಗಳನ್ನು ಹಾಗೂ ಮುಂಬರುವ ಪ್ರತಿ ತಿಂಗಳ ಭೋಜನಾ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2114 ರಿಂದ ಭರಿಸಿ ಗುತ್ತಿಗೆದಾರರಿಗೆ ಪಾವತಿಸಲು ಸಿಂಡಿಕೇಟ ಅನುಮೋದಿಸಿತು. ಮುಂದುವರೆದು, ಸಮಾಜ ಕಲ್ಯಾಣ ಇಲಾಖೆಯಿಂದ ಬಾಕಿ ಉಳಿದಿರುವ ಮತ್ತು ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು ವಿಶ್ವವಿದ್ಯಾಲಯಕ್ಕೆ ಮರುಭರಿಸಲು ಪ್ರಾಚಾರ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಯವರು ತಪ್ಪದೆ ಕ್ರಮ ಜರುಗಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು. |



**ಕುಲಸಚಿವರು** **ಕುಲಪತಿಗಳು**

| | | |
|---|---|---|
| 9) | ವಿಷಯ | ದಿನಾಂಕ: 10-03-2026 ರಂದು ಜರುಗಿದ ಶ್ರೀ. ಬಸವೇಶ್ವರ ಪೀಠದ ಸಲಹಾ ಸಮಿತಿ ಸಭೆಯಲ್ಲಿ ಕ.ವಿ.ವಿಯ ಶ್ರೀ ಬಸವೇಶ್ವರ ಪೀಠದಿಂದ "ಬಸವಶ್ರೀ ರಾಷ್ಟ್ರೀಯ ಪ್ರಶಸ್ತಿ" ಪ್ರತಿಷ್ಠಾನದ ಕುರಿತು ನಿರ್ಣಯಿಸಿದ ವಿಷಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗೆ ಮಂಡಿಸುವ ಕುರಿತು. |
| | **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯದ ಶ್ರೀ ಬಸವೇಶ್ವರ ಪೀಠದಿಂದ "ಬಸವಶ್ರೀ ರಾಷ್ಟ್ರೀಯ ಪ್ರಶಸ್ತಿ" ಪ್ರತಿಷ್ಠಾನ ಮಾಡುವ ಕುರಿತು ಹಾಗೂ ಪ್ರಸ್ತುತ ವರ್ಷದಲ್ಲಿ ನೀಡಲಾಗುವ "ಬಸವಶ್ರೀ ರಾಷ್ಟ್ರೀಯ ಪ್ರಶಸ್ತಿ" ಗುರುತಿಸಲು ಮತ್ತು ಪ್ರಶಸ್ತಿಗೆ ಮಾನದಂಡಗಳನ್ನು ರೂಪಿಸಲು ಆಯ್ಕೆ ಸಮಿತಿ ರಚಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ ಸಭೆಯು ಅನುಮೋದಿಸಿತು. |
| 10) | ವಿಷಯ | ಕರ್ನಾಟಕ ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆ ಹಾಗೂ ಕವಿವಿ ಪ್ರಾಯೋಗಿಕ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಖಾಲಿಯಿರುವ ವಿವಿಧ ವಿಷಯಗಳ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ವಿಷಯದ ಪರಿಶೀಲನೆ ಕುರಿತು. |
| | **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆ ಹಾಗೂ ಕವಿವಿ ಪ್ರಾಯೋಗಿಕ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಖಾಲಿಯಿರುವ ವಿವಿಧ ವಿಷಯಗಳ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು, ಸದರಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಈಗ ಸ್ಥಗಿತಗೊಳಿಸಲಾಯಿತು (Withhold the process Temporarily). 2023ರಿಂದ ಇಲ್ಲಿಯವರೆಗೆ ಆಗಿರುವ ಪ್ರಕ್ರಿಯೆಯನ್ನು ದಿನಾಂಕ 16.03.2026 ಹಾಗೂ ವಿವಿಧ ಸಂಘಟನೆಯವರು ನೀಡಿರುವ ಮನವಿ ಪತ್ರದಲ್ಲಿಯ ಅಂಶಗಳಿಗೆ ಅನುಸಾರ ಕ.ವಿ.ವಿ. ಸದರ ವಿಷಯವಾಗಿ ಮುಂದಿನ ಪ್ರಕ್ರಿಯೆ ಕೈಗೊಳ್ಳಲು ಮಾನ್ಯ ಕರ್ನಾಟಕ ಸರ್ಕಾರದ ಸೂಕ್ತ ಮಾರ್ಗದರ್ಶನಕ್ಕಾಗಿ ಪತ್ರ ಬರೆಯಲು ಮತ್ತು ಸರ್ಕಾರದಿಂದ ಬರುವ ನಿರ್ದೇಶನದಂತೆ, ಮುಂದಿನ ಪ್ರಕ್ರೀಯೆ ಜರುಗಿಸಲು ಸಿಂಡಿಕೇಟ ಸಭೆಯು ಸರ್ವಾನುಮತದಿಂದ ತೀರ್ಮಾನ ತೆಗೆದುಕೊಳ್ಳಲಾಯಿತು. |
| | | **ಇತರೆ ಚರ್ಚಿಸಿದ ವಿಷಯಗಳು**<br>**ಶ್ರೀ. ರಾಬರ್ಟ ದದ್ದಾಪುರಿ ಸಿಂಡಿಕೇಟ ಸದಸ್ಯರು ಮಂಡಿಸಿದ ವಿಷಯಗಳು** |
| 11 | **ವಿಷಯ** | ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರುಗಳಿಗೆ ಗುರುತಿನ ಚೀಟಿ ನೀಡುವ ಕುರಿತು |
| | **ನಿರ್ಣಯ** | ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರುಗಳಿಗೆ ಗುರುತಿನ ಚೀಟಿ ನೀಡುವ ವಿಷಯದ ಕುರಿತು ಚರ್ಚಿಸಿದ ಸಭೆಯು, ವಿವಿಧ ವಿಭಾಗಗಳಲ್ಲಿ ಮತ್ತು ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಉಪನ್ಯಸಕರುಗಳಿಗೆ ಅವರ ಸೇವಾ ಅವಧಿಗೆ ಸೀಮಿತಗೊಳಿಸಿ ತಾತ್ಕಾಲಿಕವಾಗಿ ಗುರುತಿನ ಚೀಟಿ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಆಯಾ ವಿಭಾಗಗಳ ಮುಖ್ಯಸ್ಥರುಗಳು/ ಪ್ರಾಚಾರ್ಯರುಗಳಿಗೆ ಸೂಚಿಸಲು ಸಿಂಡಿಕೇಟ ನಿರ್ಣಯಿಸಿತು. |

**ಕುಲಸಚಿವರು**



**ಕುಲಪತಿಗಳು**

| | | |
|---|---|---|
| 12 | **ವಿಷಯ** | ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಹಾಜರಾತಿಗಾಗಿ ಬಯೋಮೆಟ್ರಿಕ್ ತಂತ್ರಾಂಶವನ್ನು ಅಳವಡಿಸುವ ಕುರಿತು. |
| | **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಹಾಜರಾತಿಗಾಗಿ ಬಯೋಮೆಟ್ರಿಕ್ ತಂತ್ರಾಂಶವನ್ನು ಅಳವಡಿಸುವ ವಿಷಯವನ್ನು ಚರ್ಚಿಸಿದ ಸಿಂಡಿಕೇಟ ಸಭೆಯು "KARTAVYA" KAAMS (Karnataka Advance Attendence Management System) ಎಂಬ ತಂತ್ರಾಂಶದ ಮೂಲಕ ಹಾಜರಾತಿಯನ್ನು ಪಡೆಯಲು ಕಡ್ಡಾಯವಾಗಿ ಕ್ರಮವಹಿಸಲು ನಿರ್ಣಯಿಸಿತು. |
| 13 | **ವಿಷಯ** | ಕವಿವಿ ಘಟಕ ಬಿ.ಎಡ್. ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಬಯೊಮೆಟ್ರಿಕ್ ಪರಿಶೀಲಿಸುವ ಕುರಿತು. |
| | **ನಿರ್ಣಯ** | ಕವಿವಿ ಘಟಕ ಬಿ.ಎಡ್. ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಬಯೊಮೆಟ್ರಿಕ್ ಪರಿಶೀಲಿಸಲು ಈ ಕೆಳಗಿನಂತೆ ಸಿಂಡಿಕೇಟ್ ಉಪ-ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು: |

| | | |
|---|---|---|
| 1. | ಡಾ. (ಶ್ರೀಮತಿ) ಎನ್. ಸಿ. ಪಾಟೀಲ<br>ಸಿಂಡಿಕೇಟ್ ಸದಸ್ಯರು | ಅಧ್ಯಕ್ಷರು |
| 2. | ಡಾ. ಬಿ.ಬಿ. ಹೊಳಗುಂದಿ<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 3. | ಡಾ. ಎಮ್. ಎಚ್. ಅಗಡಿ<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 4. | ಉಪಕುಲಸಚಿವರು,<br>ವಿದ್ಯಾಮಂಡಳ ವಿಭಾಗ, ಕ.ವಿ.ವಿ.<br>ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

-
-
-
-
-
-
-
-
-
-
-
-
-
-
-
-

**ಕುಲಸಚಿವರು**



**ಕುಲಪತಿಗಳು**